

ಡಾ.ವಿನೋದ ಛೆಬ್ಬಿ

ಮಹಿಳೆಯರ ಸಬಲೀಕರಣಕ್ಕೂ ಪರಸಂಬಂಧಕ್ಕೂ ಪರಸ್ಪರ ಸಂಬಂಧವಿದೆಯೆ?

# 73: ಪರಸಂಗದ ಪ್ರಸಂಗಗಳು!

ಪರಸಂಬಂಧದ ವಿಷಯದಲ್ಲಿ ನಮ್ಮೊಳಗಿನ ದ್ವಂದ್ವ, ಮಾಧ್ಯಮಗಳ ಪ್ರಭಾವ, ಹಾಗೂ ಸಮಾಜದಲ್ಲಿರುವ ಲಿಂಗಭೇದವನ್ನು ಗಮನಿಸಿದೆವು. ಈಗ ಪರಸಂಬಂಧವನ್ನು ಮನೋಸಾಮಾಜಿಕ ದೃಷ್ಟಿಕೋನದಿಂದ ನೋಡುತ್ತ, ಎಂಥೆಂಥವರು ಪರಸಂಬಂಧಕ್ಕೆ ಕೈಹಾಕುವ ಸಾಧ್ಯತೆ ಹೆಚ್ಚಾಗಿದೆ ಎಂದು ಪರಿಶೀಲಿಸೋಣ.

ಪರಸಂಬಂಧದ ಬಗೆಗೆ ಪ್ರಪಂಚದಾದ್ಯಂತ ಅದರಲ್ಲೂ ಹೆಚ್ಚಾಗಿ ಪಾಶ್ಚಾತ್ಯ ದೇಶಗಳಲ್ಲಿ ಸಂಶೋಧನೆ ನಡೆಯುತ್ತಿದೆ. ಅಂಕಿಸಂಖ್ಯೆಗಳೂ ಹುಟ್ಟಿವೆ. ಆದರೆ ಹೆಚ್ಚಿನವರು ಪರಸಂಬಂಧವನ್ನು ಒಪ್ಪಿಕೊಳ್ಳಲು ಮುಂದೆ ಬರದಿರುವುದಿಂದ ಈ ಅಂಕಿಸಂಖ್ಯೆಗಳನ್ನು 'ನಿಖರ' ಎನ್ನುವುದಕ್ಕಿಂತಲೂ 'ಮಹತ್ವದ್ದು' ಎಂದು ಮಾತ್ರ ಲೆಕ್ಕಮಾಡಬೇಕಾಗುತ್ತದೆ. ಉದಾಹರಣೆಗೆ, ಪರಸಂಗ ಎಷ್ಟು ವ್ಯಾಪಕವಾಗಿದೆ ಎನ್ನುವುದಕ್ಕೆ ಅಂಕಿಸಂಖ್ಯೆಗಳಲ್ಲಿ ವ್ಯತ್ಯಾಸವಿದೆ. ಗಂಡಸರಲ್ಲಿ ಶೇ.2225ರಷ್ಟು, ಹಾಗೂ ಹೆಂಗಸರಲ್ಲಿ ಶೇ.1115ರಷ್ಟು ಪರಸಂಗದಲ್ಲಿ ತೊಡಗಿದ್ದಾರೆ ಎಂದು ಒಂದು ಸರ್ವೇಕ್ಷಣೆಯಲ್ಲಿ ಗೊತ್ತಾದರೆ ಇನ್ನೊಂದರಲ್ಲಿ ಇದರ ಎರಡರಷ್ಟು ಕಂಡುಬಂದಿದೆ. ವಯಸ್ಸಿನ ಬಗೆಗೆ ಹೇಳುವುದಾದರೆ, ಏಟ್ಕಿನ್ ನಡೆಸಿದ ಅಧ್ಯಯನದ ಪ್ರಕಾರ ಪರಸಂಬಂಧದಲ್ಲಿ ತೊಡಗಿಕೊಂಡಿರುವ ಗಂಡಸರ ವಯಸ್ಸು 5565 ಇದ್ದರೆ, ಹೆಂಗಸರ ವಯಸ್ಸು 4045 ಆಗಿದೆ. (ನಮ್ಮಲ್ಲಿ ಇದಕ್ಕಿಂತ ಹತ್ತು ವರ್ಷ ಕಡಿಮೆ ಇರಬೇಕು ಎನ್ನಿಸುತ್ತದೆ.) ಚಿಕ್ಕ ವಯಸ್ಸಿನಲ್ಲಿ ಮದುವೆಯಾದಷ್ಟೂ ಮುಂದೆ ಪರಸಂಬಂಧದ ಸಂಭವ ಹೆಚ್ಚು. (ಯಾಕೆ? ಬಾಲಿಶ ಬುದ್ಧಿಯಿಂದ ಆಯ್ಕೆ ಮಾಡಿದ ಸಂಗಾತಿಯ ದೋಷಗಳು ಬುದ್ಧಿ ಬಲಿತ ನಂತರ ಎದ್ದುಕಾಣುತ್ತಿರಬಹುದು.) ಆರ್ಥಿಕಮಟ್ಟದ ಪ್ರಕಾರ ಸಮಾಜದ ಕೆಳವರ್ಗದವರು ಹಾಗೂ ಮೇಲ್ವರ್ಗದವರು ಪರಸಂಗದಲ್ಲಿ ಹೆಚ್ಚಾಗಿ ಒಳಗೊಳ್ಳುತ್ತಾರೆ; ಮಧ್ಯಮವರ್ಗದವರು ಅತಿ ಕಡಿಮೆ. ಸಾಮಾನ್ಯವಾಗಿ ಆದಾಯ ಹೆಚ್ಚಾದಷ್ಟೂ ಪರಸಂಬಂಧದ ಅವಕಾಶಗಳು ಹೆಚ್ಚಾಗುತ್ತವೆ. ಲಿಂಗದ ಪ್ರಕಾರ ಹೇಳುವುದಾದರೆ, ಕಳೆದ ಶತಮಾನದಲ್ಲಿ ಪರಸಂಬಂಧ ಮಾಡುವವರಲ್ಲಿ ಹೆಚ್ಚಿನಂಶ ಗಂಡಸರೇ ಆಗಿರುತ್ತಿದ್ದರು. ಬರಬರುತ್ತ ಹೆಂಗಸರ ಸಂಖ್ಯೆ ಹೆಚ್ಚಾಗುತ್ತ, ಇತ್ತೀಚೆಗೆ ಅವರು ಗಂಡಸರನ್ನು ಸರಿಗಟ್ಟುತ್ತಿದ್ದಾರೆ. ಪರಸಂಗದಲ್ಲಿ ತೊಡಗುವ ಹೆಂಗಸರಲ್ಲಿ ಹೆಚ್ಚಿನವರು ಉದ್ಯೋಗಸ್ಥರಾಗಿದ್ದಾರೆ. ಈ ಮಧ್ಯೆ ಹೆಂಗಸರ ಹುದ್ದೆ, ಅಧಿಕಾರ ವ್ಯಾಪ್ತಿ, ಹಾಗೂ ಪರವೂರಿನ ಪ್ರಯಾಣದ ಅವಕಾಶ ಹೆಚ್ಚಾದಷ್ಟೂ ಪರಸಂಗದ ಸಂಭವ ಹೆಚ್ಚಾಗುತ್ತಿದೆ. ಮಹಿಳೆಯರು ಕುಟುಂಬದಿಂದ ಹೆಚ್ಚು ದಿನ ದೂರವಾದಷ್ಟೂ ಪರಸಂಗದ ಅವಕಾಶ ಹೆಚ್ಚಾಗುತ್ತದೆ. ಶಿಕ್ಷಣಕ್ಕೂ ಪರಸಂಬಂಧಕ್ಕೂ ನಂಟಿದೆಯೆ? ಹೌದು ಎನ್ನುತ್ತಾರೆ ತಜ್ಞರು. ಅತಿ ಕಡಿಮೆ ಹಾಗೂ ಅತಿ ಹೆಚ್ಚು ಕಲಿತ ಮಹಿಳೆಯರು ಪರಸಂಬಂಧಕ್ಕೆ ಹೆಚ್ಚಾಗಿ ಮನಸ್ಸು ಮಾಡಿದರೆ, ಪುರುಷರ ಶಿಕ್ಷಣಮಟ್ಟಕ್ಕೂ ಪರಸಂಗಕ್ಕೂ ಸಂಬಂಧವಿಲ್ಲ ಎಂದು ಗೊತ್ತಾಗಿದೆ. ಜಾನ್ ಗಾಟ್ಮನ್ ನಡೆಸಿದ ಸರ್ವೇಕ್ಷಣೆಯ ಪ್ರಕಾರ, ದಾಂಪತ್ಯ ಸುಖಕ್ಕೂ ಪರಸಂಗಕ್ಕೂ ಸಂಬಂಧವಿದೆ. 'ನಿಮ್ಮ ದಾಂಪತ್ಯ ಎಷ್ಟು ತೃಪ್ತಿಕರವಾಗಿದೆ?' ಎಂಬ ಪ್ರಶ್ನೆಗೆ, 'ಅಷ್ಟೇನೂ ತೃಪ್ತಿಕರವಾಗಿಲ್ಲ' ಎಂದು ಉತ್ತರಿಸಿದವರು 'ತುಂಬಾ ತೃಪ್ತಿಕರವಾಗಿದೆ' ಎಂದವರಿಗಿಂತ ನಾಲ್ಕು ಪಾಲು, ಹಾಗೂ 'ಪರವಾಗಿಲ್ಲ' ಎಂದವರಿಗಿಂತ ಎರಡು ಪಾಲು ಹೆಚ್ಚು ಪರಸಂಗದಲ್ಲಿ ತೊಡಗಿರುವುದು ಕಂಡುಬಂದಿದೆ. (ದಾಂಪತ್ಯದ ಅತೃಪ್ತಿ ಪರಸಂಬಂಧಕ್ಕೆ ಕಾರಣವಾಗುತ್ತದೆ.) ಸತ್ಯಕ್ಕೆ ಸಮೀಪದ ಅಂಕಿಸಂಖ್ಯೆಗಳು ದಾಂಪತ್ಯ ಚಿಕಿತ್ಸಕರಿಂದ ಬಂದಿವೆ. ದಾಂಪತ್ಯ ಚಿಕಿತ್ಸೆ ಬಯಸಿಬಂದ ದಂಪತಿಗಳಲ್ಲಿ ಸುಮಾರು ಶೇ.5065ರಷ್ಟು ಜನರು ಪರಸಂಬಂಧ ಹೊಂದಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಇದೆಲ್ಲ ಪಾಶ್ಚಾತ್ಯ ದೇಶಗಳಲ್ಲಾಯಿತು. ಇನ್ನು ನಮ್ಮ ದೇಶದಲ್ಲಿ ಅಂಕಿಸಂಖ್ಯೆ ಅಷ್ಟಾಗಿ ಲಭ್ಯವಿಲ್ಲ. ನನ್ನಲ್ಲಿ ಬಂದ ದಂಪತಿಗಳಲ್ಲಿ ಸುಮಾರು ಶೇ.10ರಷ್ಟು ಪರಸಂಬಂಧ ಕಾರಣವಾಗಿದೆ ಎಂದು ಹೇಳಬಲ್ಲೆ.

ಇದೆಲ್ಲ ಸರಿಯೆ, ಆದರೆ ಈ ಅಂಕಿಸಂಖ್ಯೆಗಳು ನಮಗೆ ಹೇಗೆ ಮುಖ್ಯವಾಗುತ್ತವೆ? ನಮಗೂ ಅನ್ವಯವಾಗುತ್ತವೆಯೆ? ಖಂಡಿತವಾಗಿಯೂ ಹೌದು. ನಮ್ಮ ಸಮಾಜವು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುವ ಗತಿಯು ಇತ್ತೀಚೆಗೆ ತೀವ್ರವಾಗುತ್ತಿದೆ. ನಮ್ಮ ಮಹಿಳೆಯರು ಹೆಚ್ಚುಹೆಚ್ಚಾಗಿ ಉದ್ಯೋಗಸ್ಥರಾಗುತ್ತಿದ್ದು, ಆರ್ಥಿಕವಾಗಿ ಹೆಚ್ಚುಹೆಚ್ಚಾಗಿ ಸಬಲರೂ ಸ್ವತಂತ್ರರೂ ಆಗುತ್ತಿದ್ದಾರೆ. ಇವರಲ್ಲಿ ಕೆಲವರು ಕೆಲಸದ ನಿಮಿತ್ತ ಆಗಾಗ ಮನೆಬಿಟ್ಟು ಪರವೂರಿನಲ್ಲಿ, ವಿದೇಶದಲ್ಲಿ ದಿನಗಟ್ಟಲೆ ಇರಬೇಕಾಗುತ್ತದೆ. ನಮ್ಮಲ್ಲಿ ಭದ್ರವಾದ ಕುಟುಂಬ ವ್ಯವಸ್ಥೆಯೇನೋ ಇದೆ. ಕೌಟುಂಬಿಕ ಸಂಸ್ಕಾರವನ್ನು ನಮ್ಮ ಮಹಿಳೆಯರು ಅಷ್ಟಾಗಿ ಬಿಟ್ಟುಕೊಡದಿದ್ದರೂ ಎಲ್ಲೋ ಒತ್ತಟ್ಟಿಗೆ ಅವರೂ ನಮ್ಮ ಪುರುಷರಂತೆ ತಮ್ಮ ಲೈಂಗಿಕತೆಯನ್ನು ಅನ್ವೇಷಿಸುವ ಸಾಧ್ಯತೆ ಖಂಡಿತವಾಗಿಯೂ ಇದೆ. ಪ್ರಶ್ನೆ ಏನೆಂದರೆ, ಇದನ್ನೆಲ್ಲ ಎದುರಿಸಲು ನಮ್ಮ ಗಂಡಸರು ತಯಾರಿದ್ದಾರೆಯೆ? ಈ ಮುಂಚೆ ಗಂಡಸರು ಹೊರಚಾಳಿ ಹಿಡಿದಾಗ ಅವರ ಹೆಂಡಂದಿರಿಗೆ, 'ಸಹಿಸಬೇಕು, ಎಷ್ಟಾದರೂ ಅವರು ಗಂಡಸರು' ಎಂದು ಉಪದೇಶಿಸಲಾಗುತ್ತಿತ್ತು. ಈಗ ಹೆಂಗಸರು ಹೊರಹೋದರೆ ನಮ್ಮ ಗಂಡಸರು ಸಹಿಸಿಕೊಳ್ಳಲು ತಯಾರಾಗುತ್ತಿದ್ದಾರೆಯೆ?

ಮಹಿಳೆಯರ ಪರಸಂಬಂಧ ನಮ್ಮಲ್ಲಿ ಸಾಕಷ್ಟು ನಡೆಯುತ್ತಿದೆ ಎನ್ನುವುದಕ್ಕೆ ಒಂದು ಬಲವಾದ ಆಧಾರ ನನ್ನಲ್ಲಿದೆ. ಸಾವಿರಾರು ನವಯುವಕರು ತಮ್ಮ ಲೈಂಗಿಕ ಕಾರ್ಯಕ್ಷಮತೆಯನ್ನು ಸಂದೇಹಿಸುತ್ತ ಸಲಹೆಗಾಗಿ ನನ್ನಲ್ಲಿ ಬಂದಿದ್ದಾರೆ. ಇವರೆಲ್ಲರೂ 17ರಿಂದ 23ರ ಆಸುಪಾಸಿನವರು. ಇವರಲ್ಲಿ ಹೆಚ್ಚಿನವರು ಲೈಂಗಿಕ ಕ್ರಿಯೆಗಾಗಿ ಸಂಪರ್ಕಿಸಿದವರು ಗೃಹಿಣಿಯರು. 'ಆಂಟೀ' ಎಂದು ಕರೆಸಿಕೊಳ್ಳುವ ಇವರೆಲ್ಲ ವಿವಾಹಿತರಾಗಿದ್ದು, ಹುಡುಗರಿಗಿಂತ ಹೆಚ್ಚು ವಯಸ್ಸಿನವರಾಗಿದ್ದಾರೆ– ಎರಡು ಪ್ರಸಂಗಗಳಲ್ಲಿ ಮಹಿಳೆಯರಿಗೆ ಈ ಹುಡುಗರಿಗಿಂತ ದೊಡ್ಡ ಗಂಡುಮಕ್ಕಳಿದ್ದಾರೆ. ಒಂದು ಪ್ರಸಂಗದಲ್ಲಿ ಒಬ್ಬಳು ಮಹಿಳೆ ಹುಡುಗನನ್ನು ತನ್ನ ಗೆಳತಿಯೊಂದಿಗೆ ಹಂಚಿಕೊಂಡಿದ್ದಾಳೆ. ಕೇವಲ ಶಾರೀರಿಕ ತೃಪ್ತಿಗಾಗಿ ನಡೆಯುವ ಈ ಘಟನೆಗಳು ಏನನ್ನು ಹೇಳುತ್ತಿವೆ? ಎಲ್ಲೋ ಒತ್ತಟ್ಟಿಗೆ ಗೃಹಿಣಿಯರೂ ಲೈಂಗಿಕ ಅನ್ವೇಷಣೆಗೆ ಹೊರಟಿದ್ದಾರೆ! ಪ್ರಶ್ನೆ ಏನೆಂದರೆ, ಒಂದುರಾತ್ರಿಯ ವ್ಯವಸ್ಥೆಯನ್ನು (**onenight stand**) ಹೋಲುವ ನಮ್ಮ ಮಹಿಳೆಯರ ಈ ಕೃತ್ಯದ ಹಿಂದಿರುವ ಪ್ರೇರಣೆ ಏನು? ಇವರ ಅಂತರಾಳದಲ್ಲಿ ಏನು ನಡೆಯುತ್ತಿದೆ? ಇದು ಪತಿಪತ್ನಿಯರ ಸಂಬಂಧಕ್ಕೆ ತೊಡಕಾಗಬಲ್ಲದೋ ಹೇಗೆ?

ಅಷ್ಟಲ್ಲದೆ ಪರಸಂಬಂಧಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಸಮಸ್ಯೆಯೂ ನಮ್ಮಲ್ಲಿ ವ್ಯಾಪಕವಾಗಿದೆ: ಪರಸಂಬಂಧದ ಸಮಸ್ಯೆಯನ್ನು ನಿರ್ವಹಿಸಲು ಸೂಕ್ತ ತರಬೇತಿ ಪಡೆದ ದಾಂಪತ್ಯ ಚಿಕಿತ್ಸಕರ ತೀವ್ರ ಕೊರತೆ. ಆಪ್ತಸಲಹೆಗಾರರು ಎನ್ನಿಸಿಕೊಳ್ಳುವವರು ನಮ್ಮಲ್ಲಿದ್ದರೂ ಮುರಿದುಹೋಗುತ್ತಿರುವ ದಾಂಪತ್ಯಕ್ಕೆ ದೆಬ್ಬೆಕಟ್ಟಿ ಹೇಗೆ ಭದ್ರಮಾಡಬೇಕು ಎಂಬುದರ ಬಗೆಗೆ ಅವರಿಗೆ ತರಬೇತಿಯಿಲ್ಲ. ಅಲ್ಲದೆ, ವಿವಾಹಿತ ಹೆಣ್ಣು ಪರಸಂಬಂಧಕ್ಕೆ ಕಾಲಿಟ್ಟರೆ ಅದು ದಾಂಪತ್ಯದ ಮುಕ್ತಾಯ ಎಂದೇ ಹೆಚ್ಚಿನ ಆಪ್ತಸಲಹೆಗಾರರು ತಿಳಿದಿದ್ದಾರೆ. ಉದಾಹರಣೆಗೆ, ಇಲ್ಲೊಂದು ದಾಂಪತ್ಯದಲ್ಲಿ ಹೆಂಡತಿಯು ಪರಸಂಬಂಧ ಇಟ್ಟುಕೊಂಡಿದ್ದಕ್ಕೆ ದಂಪತಿಯು ಆಪ್ತಸಲಹೆಗಾರರನ್ನು ಭೇಟಿಮಾಡಿದಾಗ ಆಕೆ ಏನು ಮಾಡಿದಳು? ಗಂಡನಿಗೆ ವಿಚ್ಛೇದನ ಕೊಡಲು ಸಲಹೆ ಕೊಟ್ಟಳು! ಗಂಡ ಅದನ್ನು ನಂಬಲಿಲ್ಲ, ಆ ಮಾತು ಬೇರೆ. ಒಂದುವೇಳೆ ಇದೇ ಕೆಲಸ ಗಂಡ ಮಾಡಿದ್ದರೆ ಇದೇ ಸಲಹೆ ಸಿಗುತ್ತಿತ್ತೆ? ಇಲ್ಲಿ ತರಬೇತಿಯ ಕೊರತೆಯ ಜೊತೆಗೆ ಪೂರ್ವಗ್ರಹ ಪೀಡಿತ ಮನೋಭಾವವೂ ಆಕೆಯಲ್ಲಿದೆ. ಪರಸಂಬಂಧವೆಂದರೆ ಮೂಗುಮುರಿಯುವ ಆಪ್ತಸಲಹೆಗಾರರು ನಮ್ಮಲ್ಲಿ ಸಾಕಷ್ಟಿದ್ದಾರೆ.

ದಾಂಪತ್ಯದಲ್ಲಿ– ಅದರಲ್ಲೂ ಮಹಿಳೆಯರ ಪರಸಂಬಂಧವನ್ನು ಅರ್ಥಮಾಡಿಕೊಳ್ಳುವ, ಅದಕ್ಕೆ ಸ್ಪಂದಿಸುವ, ಹಾಗೂ ಅದನ್ನು ನಿರ್ವಹಿಸುವ ಕೌಶಲ್ಯಗಳನ್ನು ನಾವು ವ್ಯಾಪಕವಾಗಿ ಬಳಕೆಯಲ್ಲಿ ತರದಿದ್ದರೆ ಶೀಘ್ರವೇ ಕೌಟುಂಬಿಕ ಅನಾಹುತಗಳನ್ನು ಎದುರಿಸಬೇಕಾಗಬಹುದು!

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
ಲೈಂಗಿಕ ಸಮಸ್ಯೆಗಳಿಗೆ: **8050255229** (ಮಧ್ಯಾಹ್ನ 3ರಿಂದ 5ರ ತನಕ);
ದಾಂಪತ್ಯ ಸಮಸ್ಯೆಗಳಿಗೆ: **8494944888** (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)
ಲೇಖಕರ ವಿಳಾಸ: **www.medisex.org**